ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಉಪವಿಭಾಗ-2ರ ಕಛೇರಿ
ಚಾವಿಸನಿನಿ,ಕೆ.ಆರ್,ಪೇಟೆ- 571426
Telephone No: 9449598660

0 4 AUG 2021

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Subdivision-2 Office,
CESC, K R Pet-571426
Web Site:cescmysore.karnataka.gov.in
E-mail ID:aeekrpet2@cescmysore.org

Company Identity Number[CIN]:- U40109KA2004SGC035177

ಕ್ರಮಾಂಕ:ಸಕಾನಿಇಂ(ವಿ)/ಸಇಂ(ತಾಂ)/2021-22/ 5148-50 ದಿನಾಂಕ: 02/08/2021

## ಸಭಾ ನಡಾವಳಿ

**ವಿಷಯ:**-ದಿನಾಂಕ:30-07-2021 ರಂದು ಸಮಯ ಮಧ್ಯಾಹ್ನ 02:30 ರಿಂದ ಕೆ.ಆರ್.ಪೇಟೆ ಉಪವಿಭಾಗ-2 ರ ಎರಡನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ಉಪವಿಭಾಗೀಯ ಕಛೇರಿಯ ಆವರಣದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕೆ.ಆರ್.ಪೇಟೆ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

## ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೆ.ಆರ್ ಪೇಟೆ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಉಪವಿಭಾಗ-2.
3. ಸಹಾಯಕ ಇಂಜಿನಿಯರ್(ತಾ) ಉಪವಿಭಾಗ-2.
4. ಸಹಾಯಕ ಇಂಜಿನಿಯರ್(ವಿ) ಕೆ.ಆರ್ ಪೇಟೆ ಪಟ್ಟಣ ಶಾಖೆ.
5. ಕಿರಿಯ ಇಂಜಿನಿಯರ್(ವಿ) ಸಂತೇಬಾಚಹಳ್ಳಿ ಶಾಖೆ.
6. ಪ್ರಸಹಾಯಕ ಇಂಜಿನಿಯರ್(ವಿ) ಕಿಕ್ಕೇರಿ ಶಾಖೆ.
7. ಕಿರಿಯ ಇಂಜಿನಿಯರ್(ವಿ) ಮಂದಗೆರೆ ಶಾಖೆ.

| ಸಭೆಗೆ ಹಾಜರಿದ್ದ ಗ್ರಾಹಕರಿಂದ ಪಡೆದ ದೂರುಗಳು | ಸಂಬಂಧಪಟ್ಟ ಅಧಿಕಾರಿ /ಶಾಖೆ | ಹಿರಿಯ ಅಧಿಕಾರಿಗಳು ದೂರುಗಳಿಗೆ ಸ್ಥಳದಲ್ಲಿ ನೀಡಿದ ಉತ್ತರಗಳು ಮತ್ತು ಸೂಚನೆಗಳು |
|---|---|---|
| 1.ರಘು ಜಕ್ಕನಹಳ್ಳಿ, ಪೋನ್ ನಂ:-9164993382 ಮಾತನಾಡಿ ನಮ್ಮ ಗ್ರಾಮದಲ್ಲಿ 3 ವೈರ್‌ಗಳಿದ್ದು ಬೀದಿದೀಪಗಳು 3 ನೇ ವೈರ್ ಕಂಟ್ರೋಲ್ ವೈರ್‌ಲ್ಲಿ ಇರುವುದಿಲ್ಲ, ಇದನ್ನು ಸರಿಪಡಿಸಿಕೊಡಬೇಕಾಗಿ ಕೋರಿರುತ್ತಾರೆ. | ಶಾಖಾಧಿಕಾರಿಗಳು ಮಂದಗೆರೆ | ಬೀದಿದೀಪಗಳನ್ನು ಸರಿಪಡಿಸುವಾಗ ಕಡ್ಡಾಯವಾಗಿ 3 ನೇ ಕಂಟ್ರೋಲ್ ವೈರಿಗೆ ಕನೆಕ್ಷನ್ ನೀಡುವುದು, ತಪ್ಪಿದ್ದಲ್ಲಿ ನೇರ ಸಂಪರ್ಕವಿರುವ ಬೀದಿದೀಪ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಸಂಬಂಧಪಟ್ಟ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಲಾಗುವುದು ಎಂದು ತಿಳಿಸಲಾಯಿತು. |
| 2.ಪುಟ್ಟೇಗೌಡರು ಕಾರಿಗನಹಳ್ಳಿ, ಫೋನ್ ನಂ:-9141396642 ರವರು ಮಾತನಾಡಿ ಪರಿವರ್ತಕಗಳು ಸುಟ್ಟಾಗ ಯಾವ ಜೇಷ್ಠತಾ ಸಂಖ್ಯೆಯಲ್ಲಿರುತ್ತದೆ ಎಂಬುದನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿರುತ್ತಾರೆ ಹಾಗೂ ಹಗ್ಗ ರಾಟೆಗಳನ್ನು ರೈತರ ಹತ್ತಿರ ತರಿಸುತ್ತಿದ್ದಾರೆ ಎಂದು ದೂರು ತಿಳಿಸಿರುತ್ತಾರೆ ಹಾಗೂ ಪರಿವರ್ತಕಗಳು ಸುಟ್ಟಾಗ ಸರ್ಕಾರದ(ನಿಗಮದ) ನಿಯಮದಂತೆ ನಿಗಧಿತ ಸಮಯದೊಳಗೆ ವಿತರಿಸಲು ಕೋರಿರುತ್ತಾರೆ ಹಾಗೂ ಪರಿವರ್ತಕಗಳು ಸುಟ್ಟಾಗ ರೈತರು ಕರೆ ಮಾಡಿದಾಗ ತಕ್ಷಣ ಪವರ್‌ಮ್ಯಾನ್‌ಗಳು ಪರಿಶೀಲಿಸಿ ನಿಮ್ಮ ಇಲಾಖೆಯಿಂದಲೇ ಸ್ಥಳದಿಂದ ಟಿಸಿಯನ್ನು ತಂದು ರಿಪೇರಿ ಮಾಡಿಸಿ ಇಲಾಖೆಯವರೇ ಟಿಸಿ ತಂದು ನಿಗಧಿತ ಸಮಯದಲ್ಲಿ ಅಳವಡಿಸಬೇಕು ಎಂದು ಕೋರಿರುತ್ತಾರೆ. | ಶಾಖಾಧಿಕಾರಿಗಳು ಮಂದಗೆರೆ | ಸುಟ್ಟಿರುವ ಪರಿವರ್ತಕಗಳನ್ನು ಬದಲಾಯಿಸಲು ಜೇಷ್ಠತಾ ಕ್ರಮದಂತೆ ಕ್ರಮವಹಿಸಲಾಗುವುದು ಹಾಗೂ ಜೇಷ್ಠತಾ ಪಟ್ಟಿಯನ್ನು ನಾಮಫಲಕದಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಲಾಯಿತು ಹಾಗೂ ಹಗ್ಗ ರಾಟೆಗಳು ಯಾವ ಶಾಖೆಯಲ್ಲಿ ಲಭ್ಯವಿಲ್ಲವೋ ಅಂತಹ ಶಾಖಾಧಿಕಾರಿಗಳು ಮನವಿ ಸಲ್ಲಿಸಲು ಸೂಚಿಸಲಾಯಿತು ಹಾಗೂ ವಿಫಲಗೊಂಡ ಪರಿವರ್ತಕಗಳನ್ನು SOP ನಿಯಮದಂತೆ ಬದಲಾಯಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಲಾಯಿತು. |

S E E (Elecl) Works Circle CESC Mandya

Scanned by CamScanner

| | | |
|---|---|---|
| 3.ಹೇಮಚಂದ್ರ ಕೊರಟಿಕೆರೆ, ಫೋನ್:7349188561 ರವರು ಮಾತನಾಡಿ ಹೊಸ ಕನೆಕ್ಷನ್ ಪಡೆಯಲು ಅಂದಾಜುಪಟ್ಟಿ ಸಲ್ಲಿಸಿರುತ್ತೇವೆ, ಇದಕ್ಕೆ ಶೀಘ್ರವಾಗಿ ಅನುಮೋದನೆ ನೀಡಬೇಕಾಗಿ ಕೋರಿರುತ್ತಾರೆ. | ಶಾಖಾಧಿಕಾರಿಗಳು ಸಂತೇಬಾಚಹಳ್ಳಿ | ವಿಭಾಗೀಯ ಕಛೇರಿಯಲ್ಲಿ ಕಡತವನ್ನು ಪರಿಶೀಲಿಸಿ ಅನುಮೋದನೆ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು. |
| 4.ನಾಗೇಶ್ ಬೊಪ್ಪನಹಳ್ಳಿ, ಫೋನ್:9901026393 ರವರು ಮಾತನಾಡಿ ಜನವರಿ-2021 ರಲ್ಲಿ ಟಿಸಿಯನ್ನು ಅಳವಡಿಸಿ, ಈಗ ನಾಗಮಂಗಲ ಹಾಗೂ ಕೆ.ಆರ್.ಪೇಟೆಯ 02 MUSS ಗಳ ವಿದ್ಯುತ್ 01 ಕಂಬದಲ್ಲಿ ಹಾದುಹೋಗಿರುವುದೆಂದು ಟಿಸಿಯನ್ನು ಆಫ್ ಮಾಡಿಸಿರುತ್ತೀರಿ ಆದುದರಿಂದ ತಕ್ಷಣ ಸಮಸ್ಯೆಯನ್ನು ಬಗೆಹರಿಸಿ ಎಂದು ಕೋರಿರುತ್ತಾರೆ. | ಶಾಖಾಧಿಕಾರಿಗಳು ಸಂತೇಬಾಚಹಳ್ಳಿ | ಸದರಿ ಕಾಮಗಾರಿಯಲ್ಲಿ ಬೇರೆ ಬೇರೆ ಫೀಡರ್‌ನ ಹೆಚ್.ಟಿ ಮತ್ತು ಎಲ್.ಟಿ ಮಾರ್ಗಗಳು ಒಂದೇ ಕಂಬದಲ್ಲಿ ಕ್ರಾಸ್ ಆಗಿರುವುದರಿಂದ ಇದನ್ನು ಸರಿಪಡಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು ಎಂದು ತಿಳಿಸಲಾಯಿತು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ & ಪಾಲನಾ ಉಪವಿಭಾಗ-02
ಸೆಸ್ಕ್, ಕೆ.ಆರ್ ಪೇಟೆ.

**ಪ್ರತಿಗಳು:**

1. ~~1.~~ ಅಧೀಕ್ಷಕ ಇಂಜಿನಿಯರ್(ವಿ) ಕಾ ಮತ್ತು ಪಾ ವೃತ್ತ ಕಛೇರಿ ಮಂಡ್ಯ, ರವರ ದಯಾಪರ ಮಾಹಿತಿಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ಕೆ.ಆರ್ ಪೇಟೆ ರವರ ದಯಾಪರ ಮಾಹಿತಿಗಾಗಿ.
3. ಕಛೇರಿ ಪ್ರತಿ.



Scanned by CamScanner